# ಮಗುವಿನಂತಹ ಮನಸ್ಸನ್ನು ಉಳಿಸಿಕೊಳ್ಳಿ

ಹೊಸ ವರ್ಷ 2026ರ ಸಂದೇಶ

ಬಾಬೂಜಿ ಮಹಾರಾಜರ 'ದಿವ್ಯಲೋಕದ ಸಂದೇಶಗಳು' ಇಂದ ಪ್ರೇರಿತ



ದಾಜಿ

# ಮಗುವಿನಂತಹ ಮನಸ್ಸನ್ನು ಉಳಿಸಿಕೊಳ್ಳಿ

ಹೊಸ ವರ್ಷ 2026ರ ಸಂದೇಶ
ಬಾಬೂಜಿ ಮಹಾರಾಜರ 'ದಿವ್ಯಲೋಕದ ಸಂದೇಶಗಳು' ಇಂದ ಪ್ರೇರಿತ



उलझनों में खोया जहाँ है, मासूम सा हो जा तू
रूह का तख़्त यही दिल है जानम, सादगी में खो जा तू

*"ಜಗವು ಗೊಂದಲದಲ್ಲಿ ಕಳೆದುಹೋಗಿದೆ, ನೀನು ಮುಗ್ಧನಾಗು. ಸಖನೆ, ಇದು ಆತ್ಮ ವಾಸಿಸುವ ಹೃದಯ, ಸರಳತೆಯಲ್ಲಿ ಕಳೆದುಹೋಗು".*

ಪ್ರಿಯ ಸೋದರ ಸೋದರಿಯರೆ,

ನಾವು 2026ನ್ನು ಸಮೀಪಿಸುತ್ತಿದ್ದಂತೆ, ಕೊಂಚ ತಡೆದು, ಗುರುವರ್ಯರು ಯಾವಾಗಲೂ ನಮಗೆ ಹೇಳುತ್ತಿದ್ದುದನ್ನು ನೀವು ಅವಲೋಕಿಸಬೇಕೆಂದು ನನ್ನ ಇಚ್ಛೆ: ಮಗುವಿನಂತಹ ಮನಸ್ಸನ್ನು ಉಳಿಸಿಕೊಳ್ಳಿ. ಮಾರ್ಗದರ್ಶನದ ಇದೊಂದು ಸರಳ ವಾಕ್ಯವು ಸಮಸ್ತ ಆಧ್ಯಾತ್ಮಿಕ ಬದುಕಿನ ಕೀಲಿಕೈಯಾಗಿದೆ. ಈ ಪಾಠ ಹಿಂದೆಂದಿಗಿಂತಲೂ ಹೇಗೆ ಮುಖ್ಯ ಹಾಗು ಇದು ನಮ್ಮ ದೇಶದ ಮಹೋನ್ನತ ಆದರ್ಶದ ಕೀಲಿಕೈಯಾಗಿರುವುದು ಹೇಗೆಂದು ನಾನು ಹೇಳುತ್ತೇನೆ.

ಇಡೀ ಲೋಕವೇ ಒಂದು ಕುಟುಂಬ, ಅಥವಾ 'ವಸುಧೈವ ಕುಟುಂಬಕಮ್'. ಇದು ನಮ್ಮ ರಾಷ್ಟ್ರ, ಭಾರತ ಮಾತೆಯ ಅತಿ ಪ್ರಾಚೀನ ಸಂದೇಶ. ಇದನ್ನು ನುಡಿಯಲು ನಾವು

ಹೆಮ್ಮೆಪಡುತ್ತೇವೆ. ದೇಶಗಳು ಒಟ್ಟಾದಾಗ ನಾವಿದನ್ನು ಹೇಳುತ್ತೇವೆ. ಆದರೆ, ಒಂದು ಪ್ರಶ್ನೆ ನಮ್ಮನ್ನು ಕೊಂಚ ತಡೆದು, ಆಲೋಚಿಸುವಂತೆ ಮಾಡಬೇಕು: ನಮ್ಮ ಮನೆಗಳಲ್ಲೇ ಈ ಆದರ್ಶವನ್ನು ಕಾಣಲಾಗದಿದ್ದರೆ, ಜಗತ್ತಿನಲ್ಲಿ ಕಾಣಲು ಅದೆಂದಾದರೂ ಸಾಧ್ಯವೆ?

ನಿಮ್ಮದೇ ಕುಟುಂಬದ ಬಗ್ಗೆ ಆಲೋಚಿಸಿ. ನಿಮ್ಮಲ್ಲಿ ಮೂರು, ನಾಲ್ಕು ಅಥವಾ ಹೆಚ್ಚು ಜನರಿರಬಹುದು. ಈ ಚಿಕ್ಕ ಕುಟುಂಬದಲ್ಲೇ ನೀವು ಯಾರನ್ನು ಅತಿ ಹೆಚ್ಚು ಪ್ರೀತಿಸುವಿರಿ ಎಂದೇನಾದರೂ ಯೋಚಿಸುವಿರಾ? ಬೇರೆಯವರು ಮಾಡಿರುವುದನ್ನು ಅಥವಾ ಮಾಡದಿರುವುದನ್ನು ಲೆಕ್ಕ ಇಟ್ಟಿದ್ದೀರಾ? "2019ರಲ್ಲಿ ಅವಳು ನನಗೆ ಹೀಗೆ ಹೇಳಿದಳು." "ನನ್ನ ತ್ಯಾಗದ ಬಗ್ಗೆ ಆತನಿಗೆ ಕಿಂಚಿತ್ತೂ ಬೆಲೆಯಿಲ್ಲ." "ನಾನು ಮಾಡುವುದನ್ನು ಅವರು ಎಂದಿಗೂ ಮೆಚ್ಚುವುದಿಲ್ಲ." ಇವು ನಾವಿಡುವ ಲೆಕ್ಕ, ಕೆಲವೊಮ್ಮೆ ಅದು ನಮ್ಮ ಅರಿವಿಗೂ ಬಂದಿರುವುದಿಲ್ಲ. ಈ ಲೆಕ್ಕಾಚಾರಗಳು ಇರುವವರೆಗೂ, ವಸುಧೈವ ಕುಟುಂಬಕಮ್ ಎನ್ನುವುದು ಕೇವಲ ಚೆಂದದ ಹೇಳಿಕೆಯಷ್ಟೆ.

ಈಗ, ಮಗುವೊಂದನ್ನು ನೋಡಿ. ಮಗುವಿನ ಹೃದಯ ಪೂರ್ಣವಾದುದು. ಅವರು ನೀರಿನಲ್ಲಿ ಆಡುವಾಗ ಜಲಜನಕ, ಆಮ್ಲಜನಕಗಳ ಬಗ್ಗೆ ಯೋಚಿಸರು; ಚೆಲ್ಲಾಡುತ್ತಾರಷ್ಟೆ. ಅವರಲ್ಲಿ ಷರತ್ತುಗಳಿಲ್ಲ, ಸೀಮೆಗಳಿಲ್ಲ, ಪ್ರೇಮದಲ್ಲಿ ಗತಕಾಲದ ನೆನಪುಗಳು ನೋಯಿಸುವುದಿಲ್ಲ. ಮಗುವೊಂದು, "ನೀನು ನನ್ನ ನಿರೀಕ್ಷೆಯಂತಿದ್ದರೆ ಮಾತ್ರ ನಾನು ನಿನ್ನನ್ನು ಪ್ರೀತಿಸುತ್ತೇನೆ," ಎನ್ನುವುದಿಲ್ಲ. ಮಗು ನಿನ್ನೆಯ ಗಾಯಗಳನ್ನು ನೆನಪಿಡುವುದಿಲ್ಲ. ಅದು ಸಂಕಷ್ಟಗಳಿಂದ ಸುರಕ್ಷಿತ ಹಾಗು ಜೀವನದ ಬವಣೆಗಳಿಂದ ಅಬಾಧಿತ ಹೃದಯ. ಕುಟುಂಬವೊಂದು ಪುಟ್ಟದಿರಲಿ, ಅಥವಾ ಸಮಸ್ತ ಜಗವನ್ನೇ ಒಳಗೊಂಡಿರಲಿ, ಇದೊಂದೇ ಹೃದಯ ಅದನ್ನು ನಿಜವಾದ ಕುಟುಂಬವನ್ನಾಗಿಸುತ್ತದೆ.

## ಆತ್ಮದ ಗದ್ದುಗೆ

ಆತ್ಮವು ವಾಸಿಸುವುದು ಹೃದಯದಲ್ಲಿ ಹಾಗು ಅದು ಲೋಕೋತ್ತರದ ಅನ್ವೇಷಣೆಯಲ್ಲಿರುವ ಅಸ್ತಿತ್ವದ ಸಾರವಾಗಿದೆಯೆಂದು ನಮ್ಮ ಗುರುಗಳು ಸದಾ ನೆನಪಿಸುತ್ತಾರೆ. ಈ ಸ್ತರವೇ ಅತಿಮುಖ್ಯವಾದುದು – ನಮ್ಮ ಸಾಧನೆಗಳಲ್ಲ, ನಾವೆಷ್ಟು ಆಧ್ಯಾತ್ಮಿಕರಾಗಿ ಕಾಣುತ್ತೇವೆಂದಲ್ಲ, ನಾವು ಎಷ್ಟು ವರ್ಷಗಳ ಕಾಲ ಈ ಪಥದಲ್ಲಿ ಸಾಗಿದ್ದೇವೆಂದಲ್ಲ. ನಮ್ಮ ಹೃದಯಗಳು ಪರಿಶುದ್ಧವಾಗಿಯೂ, ಸರಳವಾಗಿಯೂ, ಮಗುವಿನಂತೆಯೂ ಉಳಿಯುವುದು ಮುಖ್ಯ.





ಆತ್ಮವು ವಾಸಿಸುವುದು ಹೃದಯದಲ್ಲಿ ಹಾಗು ಅದು ಲೋಕೋತ್ತರದ ಅನ್ವೇಷಣೆಯಲ್ಲಿರುವ ಅಸ್ತಿತ್ವದ ಸಾರವಾಗಿದೆಯೆಂದು ನಮ್ಮ ಗುರುಗಳು ಸದಾ ನೆನಪಿಸುತ್ತಾರೆ. ಈ ಸ್ತರವೇ ಅತಿಮುಖ್ಯವಾದುದು – ನಮ್ಮ ಸಾಧನೆಗಳಲ್ಲ, ನಾವೆಷ್ಟು ಆಧ್ಯಾತ್ಮಿಕರಾಗಿ ಕಾಣುತ್ತೇವೆಂದಲ್ಲ, ನಾವು ಎಷ್ಟು ವರ್ಷಗಳ ಕಾಲ ಈ ಪಥದಲ್ಲಿ ಸಾಗಿದ್ದೇವೆಂದಲ್ಲ. ನಮ್ಮ ಹೃದಯಗಳು ಪರಿಶುದ್ಧವಾಗಿಯೂ, ಸರಳವಾಗಿಯೂ, ಮಗುವಿನಂತೆಯೂ ಉಳಿಯುವುದು ಮುಖ್ಯ.

ಕಲಿಸದೆಯೆ ಮಗುವೇನು ತಿಳಿದುಕೊಂಡಿದೆ?

ಸಾಮಾನ್ಯ ವಿಷಯದಿಂದಲೂ ವಿಸ್ಮಿತನಾಗುವುದು. ಪ್ರಮಾಣ ಕೇಳದೆ ನಂಬುವುದು. ಲೆಕ್ಕವಿಡದೆ ಪ್ರೀತಿಸುವುದು. ಯಾವುದೆ ಯುಕ್ತಿಮಾಡದೆ ನಮ್ಮೊಡನಿರುವುದು. ನೆನಪಿಡದೆ ಕ್ಷಮಿಸುವುದು. ನಿರೀಕ್ಷೆಯಿಲ್ಲದೆ ಕೊಡುವುದು.

ಇದನ್ನು ಜಾಗ್ರತೆಯಾಗಿ ಪರಿಶೀಲಿಸಿ. ನಾವು ವಸುಧೈವ ಕುಟುಂಬಕಮ್‌ಗೆ ಇದೇ ತಾನೆ ಮಾಡಬೇಕಾಗಿರುವುದು? ನಾವು ತತ್ತ್ವಜ್ಞಾನ ಮತ್ತು ಶಿಸ್ತಿನಿಂದ ಕಲಿಯಲು ಒದ್ದಾಡುತ್ತಿರುವುದನ್ನು ಮಗು ಈಗಾಗಲೆ ಜೀವಿಸುತ್ತಿದೆ.

## ನಾವು ಮರೆಯಬೇಕಾದ ಕಾಠಿಣ್ಯ

ಜೀವನ ನಮ್ಮನ್ನು ಕಠಿಣಗೊಳಿಸುತ್ತದೆ. ನಿರಾಶೆಗಳು ಹೃದಯದ ಸುತ್ತಲೂ ಗಟ್ಟಿಗೊಳ್ಳುತ್ತವೆ. ಜವಾಬ್ದಾರಿಗಳು ಕವಚವನ್ನು ಸೃಷ್ಟಿಸುತ್ತವೆ. ಶರಣಾಗತಿಯ ಬದಲು ಗಳಿಕೆಯೆ ಗುರಿಯಾದರೆ, ಆಧ್ಯಾತ್ಮಿಕ ಪ್ರಗತಿಯ ಅನ್ವೇಷಣೆಯೂ ಸಹ ಒಂದು ರೀತಿ ಒರಟೆನಿಸಬಹುದು. ಆಗ ನಿಧಾನವಾಗಿ, ಅರಿವಿಲ್ಲದೆಯೆ, ನಾವು ಲೆಕ್ಕವನ್ನಿಡಲು ಆರಂಭಿಸುತ್ತೇವೆ. ಅರ್ಥ ಮಾಡಿಕೊಳ್ಳದ ಸಂಗಾತಿ. ಕರೆ ಮಾಡದ ಮಕ್ಕಳು. ನಿರಾಕರಿಸಿದ ತಂದೆತಾಯಿ. ಒತ್ತಾಸೆಯಾಗಿ ನಿಲ್ಲದ ಒಡಹುಟ್ಟಿದವರು. ನಮ್ಮ ಭಾವನಾತ್ಮಕ ಖಾತೆ ಪುಸ್ತಕದ ಪ್ರತಿಯೊಂದು ದಾಖಲೆಯೂ ನಮ್ಮ ಮತ್ತು ನಮ್ಮ ಪ್ರೀತಿಪಾತ್ರರ ನಡುವಿನ ಗೋಡೆಗೆ ಇಟ್ಟಿಗೆಯಾಗಿ ಸೇರುತ್ತದೆ.

ನಾಲ್ವರ ಕುಟುಂಬದ ಈ ಗೋಡೆಯನ್ನೆ ನಾವು ಒಡೆಯಲಾಗದಿದ್ದರೆ, ದೇಶಗಳ ನಡುವಿನ, ಧರ್ಮಗಳ ನಡುವಿನ, ಜನಾಂಗಗಳ ನಡುವಿನ ಗೋಡೆಯನ್ನು ನಾವು ಒಡೆಯಬಲ್ಲೆವೆಂಬ ಭರವಸೆಯನ್ನು ಇಟ್ಟುಕೊಳ್ಳುವುದಾದರೂ ಹೇಗೆ?

## 2026 ರ ರಹಸ್ಯ

2026 ನಮಗೆ ನೀಡುತ್ತಿರುವ ರಹಸ್ಯ ಹೀಗಿದೆ: ಆಧ್ಯಾತ್ಮಿಕ ಅನುಭವಗಳು ಅಥವಾ ಆಧ್ಯಾತ್ಮಿಕ ಜ್ಞಾನದ ಹಿಂದೆ ಓಡುವುದರಿಂದ ಭಗವಂತ ಸಿಗಲಾರನು. ಪುಟ್ಟ ಮಕ್ಕಳಂತೆ ಆಗುವುದರಿಂದ ಮಾತ್ರ ಅದು ಸಾಧ್ಯ – ಹೂವನ್ನು ಕಂಡು ವಿಸ್ಮಯದಿಂದ ತಲೆ ಬಾಗುವವರು; ಲಜ್ಜೆಯಿಲ್ಲದೆ ಅಳಬಲ್ಲವರು; ಕಾರಣವಿಲ್ಲದೆ ನಗುವವರು; ಭಯವಿಲ್ಲದೆ ಪ್ರೀತಿಸಬಲ್ಲವರು; ಲೆಕ್ಕವಿಡದೆ ಕ್ಷಮಿಸಬಲ್ಲವರು.

ನಮ್ಮನ್ನು ಭಗವಂತನಿಗೆ ಸಂಪರ್ಕಿಸುವ ಹೃದಯವೇ ಪರಸ್ಪರರೊಂದಿಗೂ ಸಂಪರ್ಕಿಸಬಲ್ಲುದು. ದೈವಕ್ಕೆ ಒಂದು, ಕುಟುಂಬಕ್ಕೊಂದು ಮತ್ತೊಂದು – ಎರಡು ವಿಭಿನ್ನ ಹೃದಯಗಳು ನಿಮಗೆ ಬೇಕಿಲ್ಲ. ಇರುವುದೊಂದೇ ಹೃದಯ, ಅದು ಮಗುವಿನಂತಹ ಹೃದಯವಾಗಿರಬೇಕು.

ಪ್ರಪಂಚವು ನಿಮ್ಮ ಆಧ್ಯಾತ್ಮಿಕ ಪ್ರಗತಿಯನ್ನು ಅಳೆಯಲು, ದೊಡ್ಡವರಾಗಿರಿ, ಗಂಭೀರವಾಗಿರಿ, ನಿಮ್ಮನ್ನು ರಕ್ಷಿಸಿಕೊಳ್ಳಿರೆಂದು ನಿಮಗೆ ಹೇಳುತ್ತದೆ. ಆದರೆ ಗುರುಗಳು ಬೇರೆಯದನ್ನೇ ಹೇಳುತ್ತಾರೆ. ಅವರು, "ಪುಟ್ಟ ಮಕ್ಕಳಂತಾಗಿರಿ" ಎನ್ನುತ್ತಾರೆ, "ಮೂಲಕ್ಕೆ ಮರಳಿರಿ ಹಾಗು ಜೀವನ ನಿಮಲ್ಲಿ ಹೊಸತನ ತರಲಿ" ಎನ್ನುತ್ತಾರೆ, "ಎಲ್ಲವೂ ಹೃದಯವನ್ನೇ ಅವಲಂಬಿಸಿದೆ" ಎನ್ನುತ್ತಾರೆ.

## ಈ ವರ್ಷಕ್ಕೊಂದು ಅಭ್ಯಾಸ

ಈ ವರ್ಷ, ನಿಮ್ಮ ಮನೆಯೊಳಗೆ ಮಗುವಿನಂತಹ ನಿಮ್ಮ ಸ್ವಭಾವವನ್ನು ಮರಳಿ ತರುವುದರಿಂದ ಆರಂಭಿಸಿ. ಧ್ಯಾನಕ್ಕೆ ಕುಳಿತಾಗ, ಯಾವುದೇ ಲೆಕ್ಕಾಚಾರ ಅಥವಾ



2026 ನಮಗೆ ನೀಡುತ್ತಿರುವ ರಹಸ್ಯ ಹೀಗಿದೆ: ಆಧ್ಯಾತ್ಮಿಕ ಅನುಭವಗಳು ಅಥವಾ ಆಧ್ಯಾತ್ಮಿಕ ಜ್ಞಾನದ ಹಿಂದೆ ಓಡುವುದರಿಂದ ಭಗವಂತ ಸಿಗಲಾರನು. ಪುಟ್ಟ ಮಕ್ಕಳಂತೆ ಆಗುವುದರಿಂದ ಮಾತ್ರ ಅದು ಸಾಧ್ಯ



ದುರುದ್ದೇಶವಿಲ್ಲದ ಮಗು ತನ್ನ ತಂದೆತಾಯಿಯರತ್ತ ಓಡುವಂತೆ, ಬರಿಗೈ ಮತ್ತು ಮುಕ್ತ ಹೃದಯದೊಂದಿಗೆ ಬನ್ನಿ. ಧ್ಯಾನದಿಂದ ಏಳುವಾಗ, ಅದೇ ಹೃದಯವನ್ನು ಊಟದ ಮೇಜಿಗೆ, ನಿಮ್ಮ ಸಂಗಾತಿ, ಮಕ್ಕಳು ಮತ್ತು ಹೆತ್ತವರೆಡೆಗೆ ಕರೆತನ್ನಿ.

ಯಾರು ಏನೆಂದರು ಎಂಬುದನ್ನು ಗುರುತಿಟ್ಟುಕೊಳ್ಳಬೇಡಿ. ಹಳೆಯ ನೋವುಗಳ ಲೆಕ್ಕಾಚಾರವನ್ನಿಡಬೇಡಿ. ಇತರರು ನಿಮ್ಮ ನಿರೀಕ್ಷೆಗಳನ್ನು ಪೂರೈಸಿದರೆ ಮಾತ್ರ ನಿಮ್ಮ ಪ್ರೀತಿಯನ್ನು ಪಡೆಯುವರೆಂಬಂತೆ ಆಗದಿರಲಿ.

ನೀವು ಇತರರಿಗೆ ಸೇವೆ ಮಾಡುವಾಗ, ಅದು ಮಗುವೊಂದು ಆಟಿಕೆಯನ್ನು ಹಂಚಿಕೊಳ್ಳುವಂತಿರಲಿ: ಅದು ಹಂಚಿಕೊಳ್ಳುವ ಸಂತೋಷಕ್ಕಾಗಿ ಮಾತ್ರವಾಗಿದ್ದು, ಮನ್ನಣೆ ಅಥವಾ ಒಪ್ಪಿಗೆಗಾಗಿ ಇರದಿರಲಿ. ಸಂಬಂಧಗಳು ಕ್ಲಿಷ್ಟವಾದರೆ, ಮಗುವಿನಂತೆ ನಂಬಿಕೆಯನ್ನಿಡಿ. ಇನ್ನೊಬ್ಬರು ಅದಕ್ಕೆ ಅರ್ಹರಾಗಿದ್ದಾರೆಂಬ ಪ್ರಮಾಣ ನಿಮ್ಮಲ್ಲಿದೆಯೆಂದಲ್ಲ; ನಂಬಿಕೆ ನಿಮ್ಮ ಸ್ವಭಾವವಾಗಿದ್ದು, ನಿಮ್ಮ ಹೃದಯದಲ್ಲಿ ಸಂಶಯಕ್ಕೆ ಅವಕಾಶವಿಲ್ಲವೆಂಬ ಕಾರಣಕ್ಕೆ.

## ಪರಿವರ್ತನೆಯ ಅಲೆಗಳು

ಇದನ್ನು ನಾವು ಮಾಡಬಲ್ಲವರಾದರೆ, ಅಸಾಧಾರಣವಾದುದೇನೋ ಘಟಿಸುತ್ತದೆ. ನಮ್ಮ ನಡುಮನೆಯೊಳಗೆ ಆರಂಭವಾಗುವ ವಸುಧೈವ ಕುಟುಂಬಕಮ್, ಹೊರಗಡೆಗೂ ಪ್ರಸರಿಸುತ್ತದೆ. ಲೆಕ್ಕವನ್ನಿಡದ ಕುಟುಂಬವು ಲೆಕ್ಕವನ್ನಿಡದ ಸಮುದಾಯವಾಗುತ್ತದೆ. ಷರತ್ತಿಲ್ಲದೆ ಪ್ರೀತಿಸುವ ಸಮುದಾಯವು ಷರತ್ತಿಲ್ಲದೆ ಪ್ರೀತಿಸುವ ದೇಶದ ಬೀಜವಾಗುತ್ತದೆ. ಹಾಗೆಯೆ ನಿಜವಾಗಿ ಒಂದು ಕುಟುಂಬದಂತಿರುವ ದೇಶವು ಕೊನೆಗೆ ಪ್ರಪಂಚವನ್ನು ನಿಜವಾಗಲೂ ಒಂದು ಕುಟುಂಬವನ್ನಾಗಿಸಲು ಆಹ್ವಾನ ನೀಡುವಂತಾಗುತ್ತದೆ.

ಈ ಪರಿವರ್ತನೆ ಎಲ್ಲಿಂದಾದರೂ ಆರಂಭವಾಗಬೇಕು. ಅದು ನಿಮ್ಮ ಹೃದಯದಿಂದ ಆರಂಭವಾಗಲಿ. ಅದು ನಿಮ್ಮ ಮನೆಯಿಂದ ಆರಂಭವಾಗಲಿ. ಅದು ಈ ವರ್ಷವೇ ಆರಂಭವಾಗಲಿ.

## ಈ ಸಂದೇಶಕ್ಕೆ ಪ್ರೇರಣೆಯಾದ ದಿವ್ಯಲೋಕದ ಸಂದೇಶ

ಈ ಅವಲೋಕನಕ್ಕೆ ಪ್ರೇರಣೆಯಿತ್ತ, ದಿವ್ಯಲೋಕದಿಂದ ಬಂದ ಬಾಬೂಜಿಯವರ ಸಂದೇಶವನ್ನು ನೋಡೋಣ.

ಸೋಮವಾರ, ಅಕ್ಟೋಬರ್ 18, 2004, ಬೆಳಿಗ್ಗೆ 10 ಗಂಟೆ

*ಹಾನಿಯಿಂದ ನಿಮ್ಮನ್ನು ಸುರಕ್ಷಿತವಾಗಿರಿಸಿದ, ಮಗುವಿನಂತಹ ಈ ಹೃದಯವನ್ನು ಉಳಿಸಿಕೊಳ್ಳಿ. ಇದನ್ನೇ ನಮ್ಮ ಪ್ರತಿಯೊಬ್ಬ ಸೋದರರಿಗೂ ನಾವು ಹೇಳಬಹುದು: ಆತ್ಮವು ಜೀವಿಸುವುದು ಈ ಹೃದಯದಲ್ಲೇ, ಅದು ಆತ್ಮೋನ್ನತಿಯೆಡೆಗಿನ ತನ್ನ ಅನ್ವೇಷಣೆಯಲ್ಲಿರುವ ಅಸ್ತಿತ್ವದ ಸಾರವಾಗಿದೆ. ಎಲ್ಲವೂ ಇದೇ ಸ್ತರವನ್ನು ಅವಲಂಬಿಸಿದೆ. ಪುಟ್ಟ ಮಕ್ಕಳಂತಿರಿ. ಜೀವನ ನಿಮ್ಮನ್ನು ಕಠಿಣರನ್ನಾಗಿಸಿ ಮೂಲದಿಂದ ದೂರ ತಳ್ಳಿದ್ದರೆ, ಇದೊಂದು ಮಾತ್ರವೇ ನಿಮ್ಮನ್ನು ಜೀವನದೆಡೆಗೆ ಮರಳಿ ಕರೆತರಬಲ್ಲುದು. ನಿಜವಾಗಿಯೂ ಮುಖ್ಯವಾದುದರ ಮೇಲೆ ಕೇಂದ್ರಿತರಾಗಲು ನಿಮಗೆ ನೆರವಾಗುವುದೇ ನಿಮ್ಮ ಆಧ್ಯಾತ್ಮಿಕ ಪಯಣದ ಗುರಿ.*

*"ಈ ಅಗತ್ಯ ನಿಮ್ಮೊಳಗೆ ಅನುಭವಕ್ಕೆ ಬರುತ್ತಿದೆ. ನಿಮ್ಮ ಐಹಿಕ ಜೀವನ ನಿಮಗೆ ಸಂತೋಷ ನೀಡಬಲ್ಲುದು, ಆದರೆ ಅದು ಏನೋ ಕಳೆದುಹೋದ ಖಾಲಿತನವನ್ನೂ ತರಬಲ್ಲುದು. ಆದರೆ ಅವಿರತ ಸಾಧನೆಯು, ದೈವತ್ವದೊಂದಿಗೆ ಒಂದಾಗುವ ತೀವ್ರ ಹಂಬಲವನ್ನು ಇನ್ನಷ್ಟು, ಮತ್ತಷ್ಟು ಮುನ್ನೆಲೆಗೆ ತರುವುದು. ಅದೇ ದೀರ್ಘ ಅನ್ವೇಷಣೆಯ ಕೊನೆ; ಸತ್ಯವು ಅಲೆದಾಡುವ ಅನ್ವೇಷಕನೆದುರಿಗೆ ಬರುವುದು.*

*"ಈ ಕ್ಷೇತ್ರದಲ್ಲಿ ಎಲ್ಲವೂ ಬಲು ಸುಲಭ: ನೀವು ಮಾಡಬೇಕಾಗಿರುವುದೆಂದರೆ ಅದಕ್ಕಾಗಿ ಹಂಬಲಿಸುವುದು, ಅದನ್ನು ಸರಿಯಾಗಿ ಸಾಧನೆ ಮಾಡುವುದು ಹಾಗು ನಿಮ್ಮ ನಿಜವಾದ ನಿಯತಿಯಿಂದ ನಿಮ್ಮನ್ನು ದೂರವಾಗಿಸುವ, ಸಮಸ್ಯೆಗಳಿಂದಲೇ ತುಂಬಿರುವ ನಕಲಿ ಜೀವನದಲ್ಲಿ ನಿಮ್ಮ ಹಕ್ಕುಗಳನ್ನು ಕಳೆದುಕೊಂಡಾಗ ಮರೆತುಹೋದ ವಿವೇಕವನ್ನು ಜ್ಞಾಪಿಸಿಕೊಳ್ಳುವುದು."*

— ಬಾಬೂಜಿ



## ನಾವು ಮರೆತುಹೋದ ಸರಳತೆ

ಎಲ್ಲವೂ ಬಲು ಸುಲಭವೆಂದು ಬಾಬೂಜಿ ಹೇಳುತ್ತಾರೆ. ಹಂಬಲಿಸುವುದು, ಸೂಕ್ತ ಸಾಧನೆ ಹಾಗು ಕಳೆದುಕೊಂಡ ವಿವೇಕವನ್ನು ಮರಳಿ ಪಡೆಯುವುದು: ಇವಿಷ್ಟೇ ನಮಗೆ ಬೇಕಾದುದು. ಇದು, ಲೆಕ್ಕವಿಡದೆ ಪ್ರೀತಿಸುವ, ನೆನಪಿಡದೆ ಕ್ಷಮಿಸುವ ಹಾಗು ಪ್ರತಿಫಲವನ್ನು ನಿರೀಕ್ಷಿಸದೆ ನೀಡುವ ಮಗುವಿನ ವಿವೇಕ. ಅಂತಹ ವಿವೇಕವು ವಸುಧೈವ ಕುಟುಂಬಕಮ್ ಅನ್ನು ಸಾಧ್ಯವಾಗಿಸುತ್ತದೆ. ಆ ವಿವೇಕವು, ನಮ್ಮ ಹುಟ್ಟಿನೊಂದಿಗೆ ಬಂದಿರುವ ಹೃದಯದಲ್ಲಿ ನೆಲೆಸಿದ್ದು, ಅದನ್ನೀಗ ಮರಳಿ ಪಡೆಯುವುದು ನಮ್ಮ ಆಯ್ಕೆ.

2026ನೇ ವರ್ಷವು, ನಿಮ್ಮನ್ನು ನೀವು ಪುನಃ ಸರಳವಾಗಿಸಿಕೊಳ್ಳುವ ವರ್ಷವಾಗಲಿ. ಈ ವರ್ಷ, ನೀವು ಸುಲಭವಾಗಿ ನಗುವಂತಾಗಲಿ, ಸಂಕೋಚವಿಲ್ಲದೆ ಅಳುವಂತಾಗಲಿ, ಮುಕ್ತವಾಗಿ ಪ್ರೀತಿಸುವಂತಾಗಲಿ ಹಾಗು ಆಳವಾಗಿ ನಂಬುವಂತಾಗಲಿ. ಇದು, ಪ್ರಾಯಶಃ ದಶಕಗಳ ಕಾಲ ನಿಮ್ಮ ಪ್ರೀತಿಪಾತ್ರರ ವಿರುದ್ಧ ಇಟ್ಟುಕೊಂಡಿದ್ದ ಲೆಕ್ಕಾಚಾರದ ಪಟ್ಟಿಯನ್ನು ಸುಟ್ಟುಹಾಕುವ ವರ್ಷವಾಗಲಿ. ಈ ವರ್ಷ, ನಿಮ್ಮ ಅಭ್ಯಾಸವು ಏನನ್ನಾದರೂ ಪಡೆಯಲು ಮಾಡುವಂತಿರದೆ, ಮನ್ನಣೆ, ಗೌರವಗಳನ್ನು ಪಡೆದು ಜೀವಿಸಲು ಕಾಯುತ್ತಿರುವ, ಅನಂತಕಾಲದಿಂದಲೂ ಇದ್ದು ಎಲ್ಲಿಗೂ ಹೋಗದಿರುವ ದೈವೀ ಕೂಸನ್ನು ಅನಾವರಣಗೊಳಿಸುವಂತೆ ಅಭ್ಯಾಸ ಮಾಡುವ ವರ್ಷವಾಗಲಿ.



2026ನೇ ವರ್ಷವು, ನಿಮ್ಮನ್ನು ನೀವು ಪುನಃ ಸರಳವಾಗಿಸಿಕೊಳ್ಳುವ ವರ್ಷವಾಗಲಿ. ಈ ವರ್ಷ, ನೀವು ಸುಲಭವಾಗಿ ನಗುವಂತಾಗಲಿ, ಸಂಕೋಚವಿಲ್ಲದೆ ಅಳುವಂತಾಗಲಿ, ಮುಕ್ತವಾಗಿ ಪ್ರೀತಿಸುವಂತಾಗಲಿ ಹಾಗು ಆಳವಾಗಿ ನಂಬುವಂತಾಗಲಿ. ಇದು, ಪ್ರಾಯಶಃ ದಶಕಗಳ ಕಾಲ ನಿಮ್ಮ ಪ್ರೀತಿಪಾತ್ರರ ವಿರುದ್ಧ ಇಟ್ಟುಕೊಂಡಿದ್ದ ಲೆಕ್ಕಾಚಾರದ ಪಟ್ಟಿಯನ್ನು ಸುಟ್ಟುಹಾಕುವ ವರ್ಷವಾಗಲಿ. ಈ ವರ್ಷ, ನಿಮ್ಮ ಅಭ್ಯಾಸವು ಏನನ್ನಾದರೂ ಪಡೆಯಲು ಮಾಡುವಂತಿರದೆ, ಮನ್ನಣೆ, ಗೌರವಗಳನ್ನು ಪಡೆದು ಜೀವಿಸಲು ಕಾಯುತ್ತಿರುವ, ಅನಂತಕಾಲದಿಂದಲೂ ಇದ್ದು ಎಲ್ಲಿಗೂ ಹೋಗದಿರುವ ದೈವೀ ಕೂಸನ್ನು ಅನಾವರಣಗೊಳಿಸುವಂತೆ ಅಭ್ಯಾಸ ಮಾಡುವ ವರ್ಷವಾಗಲಿ.

# ಒಂದು ಗುರಿ, ಒಂದು ಹೃದಯ

ನೀವು ಅನ್ವೇಷಿಸುವ ಐಕ್ಯತೆ, ನೀವು ಪ್ರಾರ್ಥಿಸುವ ವಿಲೀನತೆ, ನೀವು ಸಾಧನೆ ಮಾಡುತ್ತಿರುವ ಆತ್ಮೋನ್ನತಿ – ಇವೆಲ್ಲವೂ ಮಗುವಿನ ಹೃದಯದಲ್ಲಿ ಅಡಗಿದೆ. ವಸುಧೈವ ಕುಟುಂಬಕಮ್ ಕೂಡ. ಇವೆರಡೂ ವಿಭಿನ್ನ ಗಂತವ್ಯಗಳಲ್ಲ. ಎರಡೂ ಒಂದೇ. ದೈವತ್ವದೊಂದಿಗೆ ವಿಲೀನವಾಗುವ ಹೃದಯ ಕುಟುಂಬದೊಂದಿಗೂ ಒಂದಾಗುತ್ತದೆ. ಭಗವಂತನೊಂದಿಗೆ ಲೆಕ್ಕಾಚಾರ ಮಾಡದ ಹೃದಯ, ತನ್ನ ಸಂಗಾತಿ, ಮಕ್ಕಳು ಅಥವಾ ಒಡಹುಟ್ಟಿದವರೊಂದಿಗೆ ಲೆಕ್ಕವನ್ನಿಡುವುದಿಲ್ಲ.

ಆ ಮಗು ನೀವೇ. ಎಂದಿನಿಂದಲೂ. ಎಂದೆಂದಿಗೂ.

## ಹೊಸ ವರ್ಷ 2026ರ ಶುಭಾಶಯಗಳು!

ಪ್ರಿಯರೆ, ಗೊಂದಲದಲ್ಲಿದ್ದಾಗ, ಮುಗ್ಧರಾಗೋಣ.


उलझनों में खोया जहाँ है, मासूम सा हो जा तू
रूह का तख़्त यही दिल है जानम, सादगी में खो जा तू

ಹೊಸ ವರ್ಷದ ಸಂದರ್ಭದಲ್ಲಿ ನೀಡಲಾದ ಸಂದೇಶ, ಜನವರಿ 1, 2026





## Masterclasses with Daaji



You can start Heartfulness meditation at any time! Join Daaji for a three-part masterclass series, where he shares the benefits of the Heartfulness way and explains how to add Heartfulness relaxation, meditation, cleaning and prayer to your daily routine. All masterclasses are free of charge.

https://heartfulness.org/global/masterclass/

## Heartfulness Practices

Discover Heartfulness practices-learn to relax, meditate, clean and pray.

https://heartfulness.org/in-en/heartfulness-practices/

heartfulness

purity weaves destiny

